**ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿ.,**

**ಮಾಚೇನಹಳ್ಳಿ, ನಿದಿಗೆ(ಅಂಚೆ), ಶಿವಮೊಗ್ಗ– 577 222, ☎ 08182–246165 www.shimul.coop**

ಐ.ಎಫ್.ಟಿ. ಸಂಖ್ಯೆ/ಶಿಸಹಾಒ/ಶೇಮತಾಂ/ಟೆಂಡರ್/102/2014–15/9781 **ದಿನಾಂಕ: 25.03.2015**

**–:<u>ಸಾರಿಗೆ ವಾಹನಗಳನ್ನು ದ್ವೈವಾರ್ಷಿಕ ಅವಧಿಗೆ ಗುತ್ತಿಗೆ ಆಧಾರದಲ್ಲಿ ಒದಗಿಸಲು ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಪ್ರಕಟಣೆ</u>:–**

ಶಿವಮೊಗ್ಗ, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲಾ ಹಾಲು ಒಕ್ಕೂಟದ ವ್ಯಾಪ್ತಿಯಲ್ಲಿ ಈ ಕೆಳಗೆ ನಮೂದಿಸಿದಂತೆ ಹಾಲು ಶೇಖರಣೆ ಮಾಡಲು ವಿವಿಧ ಸಾಮರ್ಥ್ಯದ ವಾಹನಗಳನ್ನು, ಗೂಡ್ಸ್ ಆಟೋಗಳನ್ನು, ಮ್ಯಾಕ್ಸ್ ಪಿಕ್‌ಅಪ್/ಬೋಲೆರೊ ಪಿಕ್‌ಅಪ್ ವಾಹನಗಳನ್ನು, ಕಚೇರಿ ಕೆಲಸ ಕಾರ್ಯಗಳಿಗಾಗಿ/ಪಶುವೈದ್ಯಕೀಯ ಮಾರ್ಗಗಳಿಗಾಗಿ ಟಾಟಾ ಇಂಡಿಕಾ/ Swift Dzire ಕಾರುಗಳನ್ನು ಒದಗಿಸಲು ದ್ವೈವಾರ್ಷಿಕ ಗುತ್ತಿಗೆ ಆಧಾರದ ಮೇಲೆ ಬಾಡಿಗೆ/ಗುತ್ತಿಗೆ ಪಡೆಯಲು ಟೆಕ್ನಿಕಲ್/ಕಮರ್ಷಿಯಲ್(ದರ) ಹೊಂದಿದ ಪ್ರತ್ಯೇಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ದಾರರು ಟೆಂಡರ್ ದಾಖಲಾತಿಗಳನ್ನು ನಿಬಂಧನೆಗಳ ಸಹಿತ ಜಿ.ಒ.ಕೆ. ಇ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಡೌನ್‌ಲೋಡ್ ಮಾಡಿಕೊಂಡು ಸಲ್ಲಿಸುವುದು.

**ವಿಳಾಸ : https://eproc.karnataka.gov.in**

| | | |
|---|---|---|
| 1 | **ಟೆಂಡರ್ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ** | **ದಿನಾಂಕ: 13.04.2015 ರಿಂದ** |
| 2 | ಟೆಂಡರ್ ಫಾರಂಗಳನ್ನು ಇ–ಟೆಂಡರ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ | ದಿನಾಂಕ: 07.05.2015 ರಂದು ಸಂಜೆ: 17.30 ಗಂಟೆಯವರೆಗೆ |
| 3 | **ಟೆಕ್ನಿಕಲ್ ಟೆಂಡರ್ ತೆರೆಯುವ ದಿನ** | ದಿನಾಂಕ: **11.05.2015** ರಂದು ಬೆಳಿಗ್ಗೆ: **11.30** ಗಂಟೆಗೆ |
| 4 | **ಕಮರ್ಷಿಯಲ್ ಟೆಂಡರ್‌ಗಳನ್ನು ತೆರೆಯುವ ದಿನ** | ದಿನಾಂಕ: **13.05.2015** ರಂದು ಬೆಳಿಗ್ಗೆ: **11.30** ಗಂಟೆಗೆ |
| 5 | **ಅವಶ್ಯವಿದ್ದಲ್ಲಿ ದರ ಸಂಧಾನ ಮಾಡುವ ದಿನಾಂಕ** | ದಿನಾಂಕ: **18.05.2015** ರಂದು ಬೆಳಿಗ್ಗೆ: **11.00** ಗಂಟೆಗೆ |

**I.** <u>**ಈ ಕೆಳಗೆ ನಮೂದಿಸಿದ ಹಾಲು ಶೇಖರಣಾ ಮಾರ್ಗಗಳಿಗೆ ಸಂಘಗಳಿಂದ ಶೀತಲೀಕರಣ ಕೇಂದ್ರ/ಡೈರಿಗೆ ಹಾಲು ಸಾಗಾಣಿಕೆ ಮಾಡಲು ಟಾರ್ಪಾಲ್ ಮುಚ್ಚಿದ ಬಾಡಿಯುಳ್ಳ ವಿವಿಧ ಸಾಮರ್ಥ್ಯದ 2006 ನೇ ಸಾಲಿನ ಅಥವಾ ನಂತರದ ಸಾಲಿನ ಮಾದರಿಯ ವಾಹನ ಒದಗಿಸಲು 02 ವರ್ಷದ ಅವಧಿಗೆ ಅಥವಾ ಬಿ.ಎಂ.ಸಿ. ಕೇಂದ್ರ ಪ್ರಾರಂಭವಾಗುವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಗುತ್ತಿಗೆ ಕರೆಯಲಾಗಿದೆ**</u> **:– SMU/P&I/TENDER/2014-15/8/001**

| ಮಾರ್ಗದ ಸಂಖ್ಯೆ | ಹಾಲು ಶೇಖರಣಾ ಮಾರ್ಗದ ಹೆಸರು | ವಾಹನ ಸಾಮರ್ಥ್ಯ ಟನ್‌ಗಳಲ್ಲಿ | ದಿನದ ಅಂದಾಜು ಅಂತರ ಕಿ.ಮೀ (ಎರಡುಸರತಿಯಿಂದ) | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 1 | ಅಕ್ಕಮಹಾದೇವಿ–1 ತಡಗಣಿ ಸಿ.ಸಿ. (ಹಿರೇಕಲವತ್ತಿ, ಹರಗುವಳ್ಳಿ, ಇಂಡುವಳ್ಳಿ, ತಡಗಣಿ ಸಿ.ಸಿ.) | 2.5 ಟನ್ | 128 ಕಿ.ಮೀ. | 25,000/– | 35,000/– |
| 2 | ಚನ್ನಮಲ್ಲಿಕಾರ್ಜುನ ತಡಗಣಿ ಶೀ.ಕೇಂದ್ರ (ತಲ್ಲೂರು, ತತ್ತೂರು, ಕೌಲಿ, ತೊಗರ್ಸಿ, ತಡಗಣಿ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 108 ಕಿ.ಮೀ. | 20,000/– | 30,000/– |
| 3 | ಕೋಟಿಲಿಂಗೇಶ್ವರ ತಡಗಣಿ ಶೀ.ಕೇಂದ್ರ (ನೆಲ್ಲಿಕೊಪ್ಪ, ಅಗಸನಹಳ್ಳಿ, ಕುಬಟೂರು, ಸಮನವಳ್ಳಿ, ತಡಗಣಿ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 202 ಕಿ.ಮೀ. | 20,000/– | 30,000/– |
| 4 | ಹೊಂಬುಜಆನಂದಪುರ ಶೀ.ಕೇಂದ್ರ (ವಡಹೊಸಹಳ್ಳಿ, ಕಳಸೆ, ಬಸಾಪುರ, ಯಡೇಹಳ್ಳಿ,ಆನಂದಪುರ ಶೀ.ಕೇಂದ್ರ) | ಟಾಟಾಏಸ್ | 150 ಕಿ.ಮೀ. | 15,000/– | 20,000/– |
| 5 | ತುಂಗಾ–3 ಶಿವಮೊಗ್ಗ ಡೈರಿ (ಚಿಕ್ಕದಾನವಂದಿ, ಆಯನೂರು, ಗಾಡಿಕೊಪ್ಪ, ಅಬ್ಬಲಗೆರೆ, ಶಿವಮೊಗ್ಗ ಡೈರಿ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 160 ಕಿ.ಮೀ. | 20,000/– | 30,000/– |
| 6 | ನಂಜುಂಡೇಶ್ವರ –1 ಶಿವಮೊಗ್ಗ ಡೈರಿ (ಬಾಬಳ್ಳಿ, ಕಾಚಗೊಂಡನಹಳ್ಳಿ, ಗೌರಪುರ, ಶಿವಮೊಗ್ಗ ಡೈರಿ) | 3.5 ಟನ್ | 120 ಕಿ.ಮೀ | 25,000/ | 35,000/– |
| 7 | ಅಂಬುತೀರ್ಥ ಶಿವಮೊಗ್ಗ ಡೈರಿ (ಜ್ಯೋತಿನಗರ, ಸಂತೆಕಡೂರು, ರಾಂಪುರ, ಶಿವಮೊಗ್ಗ ಡೈರಿ) | 4.5 ಟನ್ | 110 ಕಿ.ಮೀ. | 25,000/– | 35,000/– |
| 8 | ಕರಿಸಿದ್ದೇಶ್ವರ–2 ಹೊಸದುರ್ಗ ಶೀ.ಕೇಂದ್ರ (ತಾಳಕಟ್ಟ, ನಾಗರಕಟ್ಟೆ, ಹೆಬ್ಬಳ್ಳಿ, ದೇವಿಗೆರೆ, ಹೊಸದುರ್ಗ ಶೀ.ಕೇಂದ್ರ) | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ | 140 ಕಿ.ಮೀ. | 20,000/– | 30,000/– |
| 9 | ತೇರುಮಲ್ಲೇಶ್ವರ –4 ಮಾರ್ಗ (ಚಿತ್ರದುರ್ಗ ಸಿ.ಸಿ. ಕಾಟನಾಯಕನಹಳ್ಳಿ, ಜವನಗೊಂಡನಹಳ್ಳಿ, ದಿಂಡವರ, ಪಟ್ರೆಹಳ್ಳಿ) | ಮ್ಯಾಕ್ಸಿಟ್ರಕ್ | 300 ಕಿ.ಮೀ. | 20,000/– | 30,000/– |
| 10 | ತೀರ್ಥರಾಮೇಶ್ವರ–4 ಹೊನ್ನಾಳಿ ಶೀ.ಕೇಂದ್ರ(ಜಕ್ಕಿನಕೊಪ್ಪ, ಅರಳಿಹಳ್ಳಿ, ಹೆಚ್.ಕಡದಕಟ್ಟೆ, ಹೊನಾಳಿ ಶೀ.ಕೇಂದ್ರ) | 2.5 ಟನ್ | 90 ಕಿ.ಮೀ | 25,000/– | 35,000/– |

**II. ಈ ಕೆಳಕಂಡ ಕಚೇರಿ ಕೆಲಸ /ಸಂಚಾರಿ ಪಶುವೈದ್ಯಕೀಯ ಮಾರ್ಗಗಳಿಗೆ 2012 ರ ಅಥವಾ ನಂತರದ ಸಾಲಿನ ಮಾದರಿಯ ಹಳದಿ ಬೋರ್ಡ್ ಹೊಂದಿರುವ ಟಾಟಾ ಇಂಡಿಕಾ ಮತ್ತು 2012 ರ ಅಥವಾ ನಂತರದ Swift Dzire ಕಾರುಗಳನ್ನು ಒದಗಿಸಲು ಗುತ್ತಿಗೆ ಕರೆಯಲಾಗಿದೆ. ಪ್ರತಿ ಕಿ.ಮೀಗೆ ದರ ನಮೂದಿಸುವುದು. ಗುತ್ತಿಗೆ ಅವಧಿ-02 ವರ್ಷ ಅಥವಾ ಪಶುವೈದ್ಯಕೀಯ ಮಾರ್ಗಗಳಿಗೆ ಪಶುವೈದ್ಯರು ಲಭ್ಯವಿರುವರೆಗೆ ಅಥವಾ ಒಕ್ಕೂಟದ ಅವಶ್ಯಕತೆ ಇರುವವರೆಗೆ ಮಾತ್ರ ವಾಹನ ಉಪಯೋಗಿಸಲಾಗುವುದು.SMU/P&I/TENDER/2014-15/8/002**

| ಮಾರ್ಗದ ಸಂಖ್ಯೆ | ಎಂ.ವಿ.ಆರ್/ಕ್ಷೇತ್ರ ಮಾರ್ಗದ ಹೆಸರು | ವಾಹನ ಮಾದರಿ | ಮಾಸಿಕ ಕನಿಷ್ಠ ಅಂತರ | ಇ.ಎಂ.ಡಿ ₹ | ಭದ್ರತಾ ಠೇವಣಿ ₹ |
|---|---|---|---|---|---|
| 11 | ವ್ಯವಸ್ಥಾಪಕರು ಶೇಮತಾಂ ಶಿವಮೊಗ್ಗ/ಕ್ಷೇತ್ರ ಕೆಲಸ | Swift Dzire | 3000 ಕಿ.ಮೀ | 15,000/- | 20,000/- |
| 12 | ಚಿತ್ರದುರ್ಗ ಎಂ.ವಿ.ಆರ್. ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ | 3000 ಕಿ.ಮೀ | 15,000/- | 20,000/- |
| 13 | ಉಪ ವ್ಯವಸ್ಥಾಪಕರು ಚಿತ್ರದುರ್ಗ (ಶೇ) ಮಾರ್ಗ ಚಿತ್ರದುರ್ಗ | ಟಾಟಾ ಇಂಡಿಕಾ | 3000 ಕಿ.ಮೀ | 15,000/- | 20,000/- |
| 14 | ಆನಂದಪುರ ಎಂ.ವಿ.ಆರ್. ಮಾರ್ಗ-1 ಆನಂದಪುರ | ಟಾಟಾ ಇಂಡಿಕಾ | 3000 ಕಿ.ಮೀ | 15,000/- | 20,000/- |
| 15 | ಉಪ ವ್ಯವಸ್ಥಾಪಕರು (ಶೇ) ಹೊನ್ನಾಳಿ ವಿಭಾಗ, ಹೊನ್ನಾಳಿ | ಟಾಟಾ ಇಂಡಿಕಾ | 3000 ಕಿ.ಮೀ | 15,000/- | 20,000/- |
| 16 | ಹರಪನಹಳ್ಳಿ ಎಂ.ವಿ.ಆರ್ ಮಾರ್ಗ | ಟಾಟಾ ಇಂಡಿಕಾ | 3000 ಕಿ.ಮೀ | 15,000/- | 20,000/- |
| 17 | ತಡಗಣಿ ಎಂ.ವಿ.ಆರ್ ಮಾರ್ಗ-1 | ಟಾಟಾ ಇಂಡಿಕಾ | 2500 ಕಿ.ಮೀ | 15,000/- | 20,000/- |
| 18 | ತಡಗಣಿ ಎಂ.ವಿ.ಆರ್ ಮಾರ್ಗ-2 | ಟಾಟಾ ಇಂಡಿಕಾ | 2500 ಕಿ.ಮೀ | 15,000/- | 20,000/- |
| 19 | ದ್ರವಸಾರಜನಕ ವಿತರಣಾ ಮಾರ್ಗ (ದಾವಣಗೆರೆ ಡೈರಿಯಿಂದ ಒಕ್ಕೂಟದ ವ್ಯಾಪ್ತಿಯಲ್ಲಿರುವ ಶಿವಮೊಗ್ಗ, ಚಿತ್ರದುರ್ಗ ಮತ್ತು ದಾವಣಗೆರೆ ಜಿಲ್ಲೆಯ ಕೃತಕ ಗರ್ಭದಾರಣಕೇಂದ್ರಕ್ಕೆ ದ್ರವಸಾರಜನಕ, ವೀರ್ಯನಳಿಕೆ ಸರಬರಾಜು ಮಾಡುವುದು) ದ್ರವಸಾರಜನಕ ವೀರ್ಯನಳಿಕೆ ಸರಬರಾಜು ಮಾಡಲು ಒಕ್ಕೂಟವು ಸೂಚಿಸಿದ ತರಬೇತಿ ಹೊಂದಿದ ಸಿಬ್ಬಂದಿಯನ್ನು ನೇಮಿಸಿಕೊಂಡು ಇವರಿಗೆ ಮಾಹೆಯಾನ ರೂ. 10,000/- ವೆಚ್ಚವನ್ನು ನೀಡತಕ್ಕದ್ದು. | 1.5 ಟನ್ ಮ್ಯಾಕ್ಸ್‌ಪಿಕ್‌ಅಪ್ (2012model) | 3000 ಕಿ.ಮೀ | 20,000/- | 30,000/- |
| 20 | ಹುಲ್ಲಿನ ಬೀಜ/ಪಶುಮೇವು ಸರಬರಾಜು ವಾಹನ ಶಿವಮೊಗ್ಗ ಡೈರಿಯಿಂದ ಹುಲ್ಲಿನಬೀಜ/ಉಗ್ರಾಣ ಸಾಮಾಗ್ರಿಗಳನ್ನು ಒಕ್ಕೂಟದ ವ್ಯಾಪ್ತಿಯ ಮೂರು ಜಿಲ್ಲೆಗಳ ಸಂಘಗಳಿಗೆ/ಉಗ್ರಾಣಗಳಿಗೆ ಸಾಗಾಣಿಕೆ ಮಾಡುವುದು. | 2.5 ಟನ್ (2010model) | 2000 ಕಿ.ಮೀ | 25,000/- | 35,000/- |

## ನಿಬಂಧನೆ ಮತ್ತು ಷರತ್ತುಗಳು

1. **ಟೆಂಡರ್ ಸಲ್ಲಿಸ ಬಯಸುವವರು ತಮ್ಮ ಹೆಸರಿಗೆ ಕಡ್ಡಾಯವಾಗಿ ವಾಹನವನ್ನು/ದಾಖಲಾತಿಗಳನ್ನು ಹೊಂದಿರತಕ್ಕದ್ದು.**
2. **ಇ-ಪ್ರೋಕ್ಯೂರ್‌ಮೆಂಟ್ ನಿಯಾಮವಳಿ ಅಡಿ ನೊಂದಣಿ ಮಾಡಿಸದ ಗುತ್ತಿಗೆದಾರರು ನೊಂದಣಿ ಮಾಡಿಸಿ ಗುತ್ತಿಗೆ ಅರ್ಜಿ ಸಲ್ಲಿಸಬಹುದು.**
3. **ಕನಿಷ್ಠ ಇ.ಎಂ.ಡಿ. ರೂ. 15,000/- ಆದರೆ ಶೇಖರಣೆ ಮಾರ್ಗದ ವಾಹನಗಳಿಗೆ, ಟಾಟಾ ಏಸ್ / ಮ್ಯಾಕ್ಸ್ ಪಿಕ್‌ಅಪ್ ವಾಹನಗಳಿಗೆ/ ಕಾರುಗಳಿಗೆ ಅವುಗಳ ಮುಂದೆ ಸೂಚಿಸಿರುವಂತೆ ಇ.ಎಂ.ಡಿ ಬಾಬ್ತು ಡಿ.ಡಿ.ಯನ್ನು ಇ-ಪ್ರೋಕ್ಯೂರ್‌ಮೆಂಟ್ ವೇದಿಕೆಯ ನಿಯಾಮವಳಿಯಂತೆ ಸಲ್ಲಿಸುವುದು. ಕಡಿಮೆ ಇ.ಎಂ.ಡಿ ಪಾವತಿಸಿದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.**
4. ಪ್ರತಿ ಮಾರ್ಗಕ್ಕೆ ಪ್ರತ್ಯೇಕ ಟೆಂಡರ್ ಮತ್ತು ಇ.ಎಂ.ಡಿ ಸಲ್ಲಿಸುವುದು. ಪ್ರತಿ ಕಿ.ಮೀ.ಗೆ ದರ ನಮೂದಿಸುವುದು ಮತ್ತು ದರವು ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ಹಾಲು ಶೇಖರಣೆ ವಾಹನಕ್ಕೆ ಹಾಗೂ ಕಾರುಗಳಿಗೆ ಮತ್ತು ಹಾಲಿನ ಟ್ಯಾಂಕರ್‌ಗಳಿಗೆ ರಾಜ್ಯ/ರಾಷ್ಟ್ರಿಯ ಹೆದ್ದಾರಿ ಶುಲ್ಕಗಳನ್ನು ಒಕ್ಕೂಟದ ವತಿಯಿಂದ ನೀಡಲಾಗುವುದಿಲ್ಲ ಮತ್ತು ಸೇವಾ ತೆರಿಗೆಯನ್ನು ಗುತ್ತಿಗೆದಾರರೆ ಭರಿಸಬೇಕಾಗಿರುತ್ತದೆ.
5. ಹಾಲು ಶೇಖರಣಾ ವಾಹನಗಳು 2006 ನೇ ಸಾಲಿನ ಅಥವಾ ನಂತರದ ಮಾಡೆಲ್ ಆಗಿರಬೇಕು ಟಾಟಾ ಇಂಡಿಕಾ ಕಾರುಗಳು ಹಳದಿ ಬೋರ್ಡ್ ಹೊಂದಿದ್ದು 2012 ರ ಅಥವಾ ನಂತರದ ಮಾಡೆಲ್ ಆಗಿರಬೇಕು. Swift Dzire **2012 ರ ಅಥವಾ ನಂತರದ ಮಾಡಲ್ ಆಗಿರಬೇಕು.** ವಾಹನ ಚಾಲಕರು ಚಾಲನಾ ಪರವಾನಗಿ ಹಾಗೂ ಬ್ಯಾಡ್ಜ್ ಹೊಂದಿರತಕ್ಕದ್ದು.

6. ಶೇಖರಣಾ ವಾಹನಗಳು ಕೆಲವು ಸಂದರ್ಭಗಳಲ್ಲಿ ಹಾಲು ಶೇಖರಣಾ ಕಾರ್ಯದೊಂದಿಗೆ ಆಯಾ ಮಾರ್ಗಗಳಲ್ಲಿ ಮಾರ್ಗವನ್ನು ಬದಲಾಯಿಸಿದಂತೆ ಹಾಲು ಶೇಖರಣಾ, ವಿತರಣಾ ಕಾರ್ಯವನ್ನು ಸಹ ಕೈಗೊಳ್ಳಬೇಕು. ಮ್ಯಾಕ್ಸಿಪಿಕ್‌ಅಪ್ ವಾಹನಗಳು 1.5 ಟನ್ ಸಾಮರ್ಥ್ಯದವರೆಗೆ ಹಾಲನ್ನು ಸಾಗಾಣಿಕೆ ಮಾಡತಕ್ಕದ್ದು.

7. ಕಿಲೋಮೀಟರ್ ಮತ್ತು ಮಾರ್ಗದ ಪಾಸಲೆ ಬದಲಾಗಬಹುದು. ಅದರಂತೆ ಕಿಲೋಮೀಟರ್ ಹೆಚ್ಚು ಅಥವಾ ಕಡಿಮೆಯಾಗಬಹುದು. ಮಾರ್ಗದ ವಿವರಗಳನ್ನೊಳಗೊಂಡ ಶೆಡ್ಯೂಲನ್ನು ಟೆಂಡರ್ ಫಾರಂನೊಂದಿಗೆ ಲಗತ್ತಿಸಲಾಗಿದೆ.

8. ಹಾಲು ಶೇಖರಣಾ ಮಾರ್ಗದ ವಾಹನಗಳ ಪಥವನ್ನು ಕಛೇರಿಗೆ ಅವಶ್ಯ ಬಂದಲ್ಲಿ ಬದಲಾಯಿಸಲಾಗುವುದು. ಹಾಗೂ ಸಂಘಗಳನ್ನು ಕೈ ಬಿಡಬಹುದು ಅಥವಾ ಸೇರಿಸಬಹುದು. ಈ ಸಂದರ್ಭದಲ್ಲಿ ಕಿ.ಮೀ. ಅಂತರ ಕಡಿಮೆ ಅಥವಾ ಹೆಚ್ಚಿಗೆ ಆಗುವ ಸಾಧ್ಯತೆ ಇರುತ್ತದೆ. ಶೇ. 10 ಕ್ಕಿಂತ ಜಾಸ್ತಿ ಅಥವಾ ಕಡಿಮೆ ಆದಲ್ಲಿ ಪ್ರೋರೆಟಾ ಆಧಾರದಲ್ಲಿ ದರವನ್ನು ಕಡಿಮೆ ಅಥವಾ ಹೆಚ್ಚು ಮಾಡಲಾಗುವುದು.

9. ಗುತ್ತಿಗೆದಾರರ ಸೇವೆ ತೃಪ್ತಿಕರವಾಗಿರದಿದ್ದಲ್ಲಿ ಮಾರ್ಗಗಳ ಪುನರ್ ವಿಂಗಡಣೆ ಮತ್ತು ಮಾರ್ಗಗಳ ಗುತ್ತಿಗೆ ರದ್ದುಮಾಡುವುದು. ಇವುಗಳ ಬಗ್ಗೆ ತನ್ನ ಹಿತದೃಷ್ಟಿಯಿಂದ ಒಕ್ಕೂಟವು ಅವಶ್ಯಕತೆಗನುಗುಣವಾಗಿ ತೆಗೆದುಕೊಳ್ಳುವ ನಿರ್ಣಯಗಳಿಗೆ ಗುತ್ತಿಗೆದಾರರು/ ಟೆಂಡರ್‌ದಾರರು ಬದ್ಧವಾಗಿರಬೇಕು.

10. ಷಟಲ್ ಮಾರ್ಗದ ಗುತ್ತಿಗೆದಾರರು ಮುಖ್ಯ ಮಾರ್ಗದಿಂದ ಪಡೆದ ಹಾಲು ಮತ್ತು ಹಾಲಿನ ಉತ್ಪನ್ನಗಳ ಮೊತ್ತ, ಖಾಲಿ ಕ್ರೇಟ್‌ಗಳನ್ನು, ಕ್ಯಾನ್‌ಗಳನ್ನು ನಿಗದಿತ ಸ್ಥಳ ಮತ್ತು ಸಮಯದಲ್ಲಿ ಪಡೆಯುವುದು ಮತ್ತು ನೀಡುವುದು.

11. ದ್ರವಸಾರಜನಕ ವಿತರಣಾ ಕೆಲಸ ಕಾರ್ಯಗಳಿಗೆ ಅಧಿಕೃತ ತರಬೇತಿ ಹೊಂದಿದ ಸಿಬ್ಬಂದಿಯನ್ನು ಒಕ್ಕೂಟದಿಂದ ಸೂಚಿಸಲಾಗುವುದು. ದ್ರವಸಾರಜನಕ ವಿತರಣಾ ಗುತ್ತಿಗೆ ಪಡೆದ ಗುತ್ತಿಗೆದಾರರು ಇವರಿಂದ ದ್ರವಸಾರಜನಕ/ವೀರ್ಯನಳಿಕೆ ವಿತರಣೆ ಮಾಡಿಸುವುದು ಹಾಗೂ ಇವರಿಗೆ ಮಾಸಿಕ ರೂ. 10,000/– ಸಂಭಾವನೆಯನ್ನು ನೀಡುವುದು. ಇದನ್ನು ಕಿ.ಮೀ ದರದಲ್ಲಿ ಸೇರಿಸಿ ದರ ನಮೂದಿಸುವುದು. ಸದರಿ ಮಾರ್ಗಕ್ಕೆ 2012 ರ ಅಥವಾ ನಂತರದ ಮಾದರಿಯ ವಾಹನವನ್ನು ಒದಗಿಸುವುದು.

12. ಕ್ರಮ ಸಂಖ್ಯೆ 20 ರ ಹುಲ್ಲಿನ ಬೀಜ, ಪಶುಆಹಾರ ಸರಬರಾಜು ವಾಹನಕ್ಕೆ ಟೆಂಡರ್ ಹಾಕುವವರು 2010 ರ ಅಥವಾ ನಂತರದ ಮಾದರಿಯ 2.5 ಟನ್ ಸಾಮರ್ಥ್ಯದ ವಾಹನ ಹೊಂದಿದ್ದು, ಹುಲ್ಲಿನ ಬೀಜ ಮೇವು ಉಗ್ರಾಣ ಸಾಮಾಗ್ರಿಗಳು ಶಿವಮೊಗ್ಗ ಕೇಂದ್ರ ಡೈರಿ ಉಗ್ರಾಣದಿಂದ ಪಡೆದು ಸೂಚಿಸಿದ ಸ್ಥಳಕ್ಕೆ ಸಾಗಿಸುವುದು. ಲೋಡಿಂಗ್/ಅನ್‌ಲೋಡಿಂಗ್ ವೆಚ್ಚ ಸೇರಿಸಿ ದರ ನಮೂದಿಸುವುದು.

13. ಎಲ್ಲಾ ಸಾರಿಗೆ ಟೆಂಡರ್‌ದಾರರು ಶಾಸನ ಬದ್ಧವಾದ ರೀತಿಯಲ್ಲಿ ತಮ್ಮ ನೌಕರರಿಗೆ(ಚಾಲಕರು/ಕಂಡಕ್ಟರ್)ವೇತನ/ಭವಿಷ್ಯನಿಧಿ/ ಇ.ಎಸ್.ಐ ಮುಂತಾದವುಗಳನ್ನು ಪಾವತಿಸಬೇಕಾಗಿರುತ್ತದೆ. ಟೆಂಡರ್ ಪಡೆದ ಸಾರಿಗೆ ಗುತ್ತಿಗೆದಾರರೇ ತಮ್ಮ ನೌಕರರಿಗೆ ಶಾಸನ ಬದ್ಧವಾದ ರೀತಿಯಲ್ಲಿ ವೇತನ ಪಾವತಿಸತಕ್ಕದ್ದು ಹಾಗೂ ಇದಕ್ಕೆ ಒಕ್ಕೂಟವು ಜವಾಬ್ದಾರಿಯಾಗಿರುವುದಿಲ್ಲ.

**ಯಾವುದೇ ಕಾರಣ ನೀಡದೆ ಟೆಂಡರನ್ನು ಅಂಗಿಕರಿಸುವ /ತಿರಸ್ಕರಿಸುವ ಹಕ್ಕನ್ನು ವ್ಯವಸ್ಥಾಪಕ ನಿರ್ದೇಶಕರು ಹೊಂದಿರುತ್ತಾರೆ. ವ್ಯವಸ್ಥಾಪಕ ನಿರ್ದೇಶಕರ ತೀರ್ಮಾನವೆ ಅಂತಿಮವಾದುದು.**

**ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಮಾರುಕಟ್ಟೆ/ಶೇಮತಾಂ/ಸಾರಿಗೆ ವಿಭಾಗವನ್ನು ಮತ್ತು ಒಕ್ಕೂಟದ ವೆಬ್‌ಸೈಟ್ – www.shimul.coop ಸಂಪರ್ಕಿಸಬಹುದು.**

ಸಹಿ/–

**ವ್ಯವಸ್ಥಾಪಕ ನಿರ್ದೇಶಕರು**

ಶಿವಮೊಗ್ಗ,ದಾವಣಗೆರೆ ಮತ್ತು ಚಿತ್ರದುರ್ಗ

ಜಿಲ್ಲಾ ಸಹಕಾರ ಹಾಲು ಒಕ್ಕೂಟ

ದಿನಾಂಕ : 25.03.2015

ಸ್ಥಳ : ಮಾಚೇನಹಳ್ಳಿ